

# ಬೊಂಬೆಯಾಟವಯ್ಯಾ...



■ ಸುಶೀಲಾ ಡೋಣೂರ

ಚಿತ್ರ: ವಿಶ್ವನಾಥ ಸುವರ್ಣ

ಸೀತಾಪಹರಣ ಮಾಡಿದ ರಾವಣನ ವಿಕಾರ ನಗು, ಸಹಾಯಕ್ಕಾಗಿ ಅಂಗಲಾಚಿದ ಸೀತೆಯ ಆರ್ತನಾದ, ರಾವಣನ ಅಟ್ಟಹಾಸವನ್ನು ರಾಮ ಮಟ್ಟ ಹಾಕಿದ ಬಗೆ, ಶೂರ್ಪನಖಿಯ ರಾಮಮೋಹ, ಲಕ್ಷ್ಮಣನ ಸಹೋದರ ಪ್ರೇಮ, ಹನುಮಂತನ ಗುರು ನಿಷ್ಠೆ...

–ರಾಮಾಯಣದ ಈ ಎಲ್ಲಾ ರೋಚಕ ಕತೆಗಳನ್ನು ನಾವೆಲ್ಲ ಅಂದು ಓದಿ ತಿಳಿಯಲಿಲ್ಲ. ಟಿ.ವಿ ಪೆಟ್ಟಿಗೆಗಳೂ ಆಗ ಮನೆಗೊಂದರಂತೆ ಇರಲಿಲ್ಲ. ನಾಟಕ, ರೂಪಕ, ಬಯಲಾಟ, ತೊಗಲು ಬೊಂಬೆಯಾಟದಂತಹ ಜಾನಪದ ಕಲೆಗಳೇ ಮನರಂಜನೆಯ ಪ್ರಮುಖ ಆಕರಗಳಾಗಿದ್ದ ಕಾಲವದು. ಅದರಲ್ಲೂ ಬೊಂಬೆಯಾಟಗಾರರ ಕೈಚಳಕದಿಂದ ತೊಗಲು ಬೊಂಬೆಗಳು ಹೇಳುತ್ತಿದ್ದ ಕಥೆಗಳು ಮನದಲ್ಲಿ ಇಂದಿಗೂ ನೆಲೆನಿಂತಿವೆ.

ಊರಿನ ಹೊರಗೆ ಬೊಂಬೆ ಆಡಿಸುವವರು ಟೆಂಟು ಹಾಕಿದರೆಂದರೆ ಊರೊಳಗೆ ಹಬ್ಬದ ವಾತಾವರಣ. ದೊಡ್ಡವರು ಚಿಕ್ಕವರೆನ್ನದೇ ಎಲ್ಲರೂ ಗುಂಪು ಕಟ್ಟಿಕೊಂಡು ಬೊಂಬೆಯಾಟ ನೋಡಲು ಹೋಗುವುದೇ ಒಂದು ರೋಮಾಂಚಕ ಕ್ಷಣ. 'ರಾವಣನ ಮೀಸೆ ಅಷ್ಟು ದಪ್ಪಗಿರುತ್ತದೆ. ಸೀತೆಯ ಕೇಶರಾಶಿ ಅಷ್ಟು ನೀಳವಾಗಿರುತ್ತದೆ, ಸೂರ್ಪನಕಿಯ ಮೂಗು ಅಷ್ಟು ವಿಕಾರವಾಗಿರುತ್ತದೆ' ಎಂಬ ಸಂಗತಿಗಳು ತಿಳಿದಿದ್ದೇ ಬೊಂಬೆಯಾಟ ನೋಡಿ.

(8ನೇ ಪುಟ ನೋಡಿ)